ತೆರವುಗೊಳಿಸಿ ಬೇರೆ ಕಡೆ ನಿರ್ಮಿಸಲು ಯಾವುದೇ ಬದಲಿ ಮಾರ್ಗವು ಇರುವುದಿಲ್ಲ. ಆದಾಗ್ಯೂ, ಭಾರತೀಯ ವಿದ್ಯುಚ್ಛಕ್ತಿ ಕಾಯಿದೆಯ ಪ್ರಕಾರ, ಭೂಮಿಯ ಕೆಳಮಟ್ಟದಿಂದ ವಿದ್ಯುತ್ ಪ್ರಸರಣ ಮಾರ್ಗದ ಕೆಳಭಾಗದವರೆಗೆ ಇರಬೇಕಾದ ಅಂತರಕ್ಕಿಂತ ಹೆಚ್ಚಿನ ಅಂತರವು ಇರುವಂತೆ ವಿದ್ಯುತ್ ಮಾರ್ಗವನ್ನು ನಿರ್ಮಾಣ ಮಾಡಲಾಗಿರುವುದರಿಂದ ಸಾರ್ವಜನಿಕರಿಗೆ ಸಾಮಾನ್ಯವಾಗಿ ಯಾವುದೇ ತೊಂದರೆಯಾಗುವುದಿಲ್ಲ.

ಅಲ್ಲದೇ, ಬಾಗೇಪಲ್ಲಿ ಪಟ್ಟಣದ ಮಧ್ಯಭಾಗದಲ್ಲಿ ರಸ್ತೆ ಬದಿಯಲ್ಲಿದ್ದ ಕಂಬಗಳನ್ನು ಮಧ್ಯ ಭಾಗಕ್ಕೆ ಸ್ಥಳಾಂತರಿಸುವಂತೆ ಆಗಿನ ಶಾಸಕರು ನೀಡಿದ ಮನವಿಯ ಮೇರೆಗೆ ಪಿ.ಡಬ್ಲ್ಯೂ.ಡಿ. ಇಲಾಖೆಯಿಂದ ಸಲ್ಲಿಸಲಾದ ಅರ್ಜಿಯ ಪ್ರಕಾರ, 11 ಮೀಟರ್ ಉದ್ದದ ಸ್ಪನ್ ಕಂಬಗಳನ್ನು ಅಳವಡಿಸಿ 11 ಕೆ.ವಿ. ವಿದ್ಯುತ್ ಮಾರ್ಗವನ್ನು 2005ನೇ ಇಸವಿಯಲ್ಲಿ ಎಳೆಯಲಾಗಿರುತ್ತದೆ. ಇದನ್ನು ಭೂಮಿಯ ಕೆಳಮಟ್ಟದಿಂದ ವಿದ್ಯುತ್ ಮಾರ್ಗದ ಕೆಳಭಾಗದವರೆಗೆ ನಿಯಮಾನುಸಾರ ಇರಬೇಕಾದ ಅಂತರ ಇರುವಂತೆ ನಿರ್ಮಾಣಿಸಿರುವುದರಿಂದ ಸಾರ್ವಜನಿಕರಿಗೆ ಸಾಮಾನ್ಯವಾಗಿ ಯಾವುದೇ ತೊಂದರೆ ಆಗುವುದಿಲ್ಲ.

ಸರ್ಕಾರಿ ಆಸ್ಪತ್ರೆಗಳಲ್ಲಿ ಶುಶ್ರೂಷಕಿಯರ ಕೊರತೆ

221 (564) ಶ್ರೀ ಶಿವಶಂಕರ ರೆಡ್ಡಿ ಎನ್.ಹೆಚ್. (ಗೌರಿಬಿದನೂರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗೌರಿಬಿದನೂರು ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಗಳಲ್ಲಿ ಶುಶ್ರೂಕಿಯರ ಕೊರತೆಯು ತೀವ್ರ ರೀತಿಯಲ್ಲಿರುವುದರಿಂದ ಒಳ ಹಾಗೂ ಹೊರ ರೋಗಿಗಳ ಚಿಕಿತ್ಸೆಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ಸಮಸ್ಯೆಯನ್ನು ನೀಗಿಸಿ ರೋಗಿಗಳ ಚಿಕಿತ್ಸೆಗೆ ಅನುಕೂಲ ಮಾಡಿಕೊಡಲಾಗುವುದೇ?

ಶ್ರೀ ಬಿ. ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಗೌರಿಬಿದನೂರು ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಗಳಲ್ಲಿ 24 ಶುಶ್ರೂಷಕರ ಹುದ್ದೆಗಳು ಮಂಜೂರಾಗಿದ್ದು, 20 ಶುಶ್ರೂಷಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. 4 ಹುದ್ದೆಗಳು ಖಾಲಿ ಇವೆ, ಹಾಗೂ ಎನ್.ಆರ್.ಹೆಚ್.ಎಂ. ಅಡಿಯಲ್ಲಿ 24x7 ಗಂಟೆಯ ಸೇವೆಗೆ ಗುರುತಿಸಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ

ಹೆಚ್ಚುವರಿಯಾಗಿ 8 ಶುಶ್ರೂಷಕರುಗಳನ್ನು ನೇಮಿಸಿ ಒಳ ಹಾಗೂ ಹೊರ ರೋಗಿಗಳಿಗೆ ತೊಂದರೆಯಾಗದಂತೆ ಚಿಕಿತ್ಸೆ ನೀಡಲಾಗುತ್ತಿದೆ.

ಆ) ಉದ್ಭವಿಸುವುದಿಲ್ಲ.

ಗಂಗಾ ಕಲ್ಯಾಣ ಯೋಜನೆಯಲ್ಲಿ ಪೂರೈಕೆಯಾಗುವ ಪಂಪ್ ಸೆಟ್‌ಗಳ ಗುಣಮಟ್ಟ

222 (598) ಶ್ರೀ ಸಿದ್ದು ಸವದಿ (ತೇರದಾಳ್) ಮಾನ್ಯ ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಿಂದ ಗಂಗಾ ಕಲ್ಯಾಣ ಯೋಜನೆಯಲ್ಲಿ ಪೂರೈಸಲಾದ ಪ್ರತಿಯೊಂದು ಕಂಪನಿಯ ಸಬ್‌ಮರ್ಸಿಬಲ್ ಪಂಪ್‌ಸೆಟ್‌ಗಳನ್ನು ಕೊಯಮತ್ತೂರಿನ ಎಸ್.ಐ.ಟಿ.ಎ.ಆರ್.ಸಿ.ಯಲ್ಲಿ ಗುಣಮಟ್ಟದ ಪರೀಕ್ಷೆ ನಡೆಸಿದ್ದು ನಿಜವೇ;

ಆ) ಸದರಿ ಪರೀಕ್ಷೆಯ ಪ್ರಕಾರ ಎಷ್ಟು ಕಂಪನಿಯ ಪಂಪ್‌ಸೆಟ್‌ಗಳನ್ನು ಪ್ರಾರಂಭಿಸಲಾಗಿದೆ;

ಇ) ಪಾಸಾಗದ ಕಂಪನಿಗಳ ಮೇಲೆ ಏನು ಕ್ರಮ ತೆಗೆದುಕೊಳ್ಳಲಾಗಿದೆ. ಅವುಗಳನ್ನು ಕಪ್ಪು ಪಟ್ಟಿಗೆ ಸೇರಿಸಲಾಗಿದೆಯೇ; ಹಾಗಿಲ್ಲವಾದಲ್ಲಿ, ಕಾರಣಗಳೇನು;

ಈ) ಗಂಗಾ ಕಲ್ಯಾಣ ಯೋಜನೆಯ ಫಲಾನುಭವಿಗಳಾದ ಹಿಂದುಳಿದ ಮತ್ತು ದಲಿತ ರೈತರಿಗೆ ಗುಣಮಟ್ಟ ರಹಿತ ಪಂಪುಗಳನ್ನು ಮತ್ತು ಅತ್ಯಂತ ಕಳಪೆ ಮಟ್ಟದ ಸಲಕರಣೆಗಳಾದ ಕೇಬಲ್, ಪಂಪು, ಪೆನಾಲ್‌ಗಳನ್ನು ಪೂರೈಸುತ್ತದೆ ಅಂತ ಆಪಾದನೆ ಇದ್ದದ್ದು ನಿಜವೇ; ಹಾಗಿಲ್ಲದಿದ್ದಲ್ಲಿ ಯಾವ ರೀತಿ ಪರೀಕ್ಷೆ ನಡೆಸಲಾಗುವುದು?

ಶ್ರೀ ಎ. ನಾರಾಯಣಸ್ವಾಮಿ (ಸಮಾಜ ಕಲ್ಯಾಣ ಮತ್ತು ಬಂದೀಖಾನೆ ಸಚಿವರು):

ಅ) ಹೌದು.

ಆ) ಹನ್ನೊಂದು.

ಇ) ಅನುತ್ತೀರ್ಣಗೊಂಡ ಪಂಪ್‌ಸೆಟ್‌ಗಳನ್ನು ಸರಬರಾಜು ಮಾಡಿದ ಕಂಪನಿಗಳಿಗೆ ನೋಟೀಸ್ ಜಾರಿ ಮಾಡಲಾಗಿತ್ತು. ಪಂಪ್ ಸೆಟ್‌ಗಳನ್ನು ಜಿಲ್ಲೆಗಳಿಂದ ಬೆಂಗಳೂರಿಗೆ, ನಂತರ ಕೊಯಮತ್ತೂರಿಗೆ ಸಾಗಣೆ ಮಾಡುವ ಹಂತದಲ್ಲಿ, ಸಾಗಣೆ ಕಂಪನಿಯವರು ಲೋಡ್ ಮತ್ತು ಅನ್‌ಲೋಡ್ ಮಾಡುವಾಗ ಜಖಂ ಆಗಿದ್ದು, ಪಂಪ್‌ಸೆಟ್‌ಗಳ ಡೈನಾಮಿಕ್ ಬ್ಯಾಲೆನ್ಸ್